**<u>2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ</u>**

**<u>ಸತ್ರ ಮೊಕದ್ದಮೆ ಸಂಖ್ಯೆಃ 142/2023</u>**

ಪಿ.ಡಬ್ಲುಃ 7 ಸಿಡಬ್ಲುಃ 10

| | | |
|---|---|---|
| ಸಾಕ್ಷಿಯ ಹೆಸರು | : | ಶಾಂತಪ್ಪ |
| ತಂದೆಯ ಹೆಸರು | : | ತಿಪ್ಪಣ್ಣ |
| ವಯಸ್ಸು | : | 28 ವರ್ಷಗಳು |
| ವೃತ್ತಿ | : | ಪ್ಲಂಬರ್ |
| ವಾಸಸ್ಥಳ | : | ಅಲ್ಲಿಪುರ |

**<u>ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ 06.02.2026.</u>**

**<u>ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-</u>**

1) ಅಲ್ಲಿಪುರದಲ್ಲಿ ನನ್ನ ಮನೆ ಅಂಬೇಡ್ಕರ ಕಾಲೋನಿ, ಎಸ್ಸಿ ಕಾಲೋನಿಯಲ್ಲಿ ಬರುತ್ತದೆ. ನ್ಯಾಯಾಲಯದ ಮುಂದೆ ವಿಸಿ ಮೂಲಕ ಹಾಜರಿರುವ 1 ನೇ ಆರೋಪಿತನ ಪರಿಚಯವಿದೆ. ಅವರು ಅಲ್ಲಿಪುರದಲ್ಲಿ ಇರುತ್ತಾರೆ. ಅವರು ವಾಟರ್ ಬೊರ್ಡ ನ ಪಂಪ್ ಹೌಸದಲ್ಲಿ ಕೆಲಸ ಮಾಡುತ್ತಾರೆ ಎನ್ನುವುದು ಗೊತ್ತಿತ್ತು, ಆದರೆ ಎಲ್ಲಿ ಕೆಲಸ ಮಾಡುತ್ತಾರೆ ಎಂದು ಗೊತ್ತಿಲ್ಲ.

2. ಹಾಜರಿರುವ 2 ನೇ ಆರೋಪಿ, 4 ಮತ್ತು 5 ನೇ ಆರೋಪಿತರ ಪರಿಚಯವಿದೆ. ನನಗೆ 1 ನೇ ಆರೋಪಿಯ ಹೆಂಡತಿ ಚಾಸಾ.1 ಇವರ ಪರಿಚಯವಿದೆ.

3. ನಾನು ದಿಃ07.08 ದ ರಂದು ಇಸ್ವಿ ನೆನಪಿಲ್ಲ, ಶಂಕ್ರಪ್ಪ ತಾತನ ಗುಡಿಗೆ ನಾನು ಮತ್ತು ಚಾಸಾ.8 ಹೋಗುತ್ತಿದ್ದೆವು. ಮುಂಜಾನೆ 11.00 ಗಂಟೆಗೆ 1 ನೇ ಆರೋಪಿಯ ಮನೆಯ ಹತ್ತಿರ ಜನ ಸೇರಿದ್ದರು, ಅಲ್ಲಿ ಜಗಳವಾಗಿತ್ತು, ಆದ್ದರಿಂದ ನಾವು ನೋಡಲು ಹೋಗಿದ್ದೆವು. 1 ನೇ ಆರೋಪಿಯ ಹೆಂಡತಿಗೆ, 1 ನೇ ಆರೋಪಿ ಎಣ್ಣೆ ಚೆಲ್ಲಿ, ಗುತ್ತಿಗೆಗೆ ಬೆಂಕಿ ಹಚ್ಚಿದ್ದಾ ಎಂದು ಹೇಳಿದ್ದರು. ಆದ್ದರಿಂದ ಅವಳ ಕುತ್ತಿಗೆ ಸುಟ್ಟಿತ್ತು.

4. ನೇರದವರು ಹೇಳಿದ್ದರಿಂದ 1 ನೇ ಆರೋಪಿ ತನ್ನ ಹೆಂಡತಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋದ. 3 ದಿವಸಗಳ ನಂತರ ಪೋಲೀಸರು ನನ್ನನ್ನು ಕರೆದು ವಿಚಾರಣೆ ಮಾಡಿದ್ದಾರೆ. ಪೋಲೀಸರ ಮುಂದೆ ಈ ಮೇಲೆ ಹೇಳಿದ ವಿಷಯವನ್ನು ಮಾತ್ರ ಹೇಳಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ಅವರ ವಾದವನ್ನು ಕೇಳಿ, ಸಾಕ್ಷಿಯ ಹೇಳಿಕೆಯನ್ನು ಹಾಗೂ ಮುಖ್ಯ ವಿಚಾರಣೆಯನ್ನು ಪರಿಶೀಲನೆ ಮಾಡಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಸರ್ಕಾರಿ ಅಭಿಯೋಜಕರಿಗೆ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).

ಪಾಟೀಸವಾಲು ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-

5. 1 ನೇ ಆರೋಪಿಯ ತಾಯಿಯ ಹೆಸರು ಹನುಮಂತಮ್ಮ ಎಂದರೆ ಸರಿ. ಅವರ ಮನೆಯ ಹತ್ತಿರ ಇರುವವರ ಹೆಸರು ಪದ್ಮಾವತಿ ಮತ್ತು ಅವಳ ಮಗ ತಾಯಣ್ಣ ಎಂದರೆ ಸರಿ. 3, 6 ಹಾಗೂ 7 ನೇ ಆರೋಪಿತರು 1 ನೇ ಆರೋಪಿಯ ಸಂಬಂಧಿಕರು ಎಂದರೆ ನನಗೆ ಗೊತ್ತಿಲ್ಲ. ಅವರೆಲ್ಲರೂ ಸೇರಿಕೊಂಡು ಚಾಸಾ.1 ಇವಳಿಗೆ ಹೊಡೆಯುವುದು, ಬೈಯುತ್ತಿದ್ದರು ಮತ್ತು ಹಿಂಸೆ ನೀಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

6. ದಿಃ07.08.2023 ರಂದು ಶಂಕ್ರಪ್ಪ ತಾತನ ಗುಡಿಗೆ ಹೋಗುತ್ತಿದ್ದೆ ಎಂದರೆ ಸರಿ. ನಾನು ಸದರಿ ದೇವಸ್ಥಾನಕ್ಕೆ ಮುಂಜಾನೆ 7.30 ಗಂಟೆಗೆ ಹೋಗುತ್ತಿದ್ದೆ ಎಂದರೆ ಸರಿಯಲ್ಲ. ನಾನು 1 ನೇ ಆರೋಪಿಯ ಮನೆಗೆ ಹೋದಾಗದ , ಅಲ್ಲಿ 1 ನೇ ಆರೋಪಿ ಚಾಸಾ.1 ಇವರಿಗೆ ಹೇ ದರಿದ್ರ ಸೂಳೆ ನನ್ನ ಸಂಬಂಧಿಕರಿಗೆ ಮನೆಗೆ ಬರಬೇಡ ಎಂದು ಹೇಳುತ್ತಿಯಾ ಎಂದು ಹೇಳಿ ಹೊಡೆಯುತ್ತಿದ್ದ ಎಂದರೆ ಸರಿ. ಅದಕ್ಕೆ ಪ್ರಭಾವತಿ ಇವಳು ನನಗೆ ಯಾಕೇ ಹೊಡೆಯುತ್ತಿಯಾ ಎಂದು ಕೇಳಿದ್ದಕ್ಕೆ, 1 ನೇ ಆರೋಪಿ ನನಗೆ ಎದುರು ಮಾತಾಡ್ತಿಯಾ, ನನ್ನ ಕಛೇರಿಗೆ ಬಂದು ನನ್ನ ಮಾರ್ಯದೆ ಕಳುಯುತ್ತಿಯಾ ಎಂದು ಹೇಳಿದಾ ಎಂದರೆ ನನಗೆ ಗೊತ್ತಿಲ್ಲ. 1 ನೇ

ಆರೋಪಿ ಚಾಸಾ.1 ಇವಳಿಗೆ ಎಣ್ಣೆಯನ್ನು ಉಗಿದ್ದಾಗ, ಅವಳು ತನ್ನ ಮಗಳಿಗೆ ಹೊರಗೆ ಹೋಗು ಎಂದು ಹೇಳಿದ್ದು, ಅವರ ಮಗಳು ಮಂಚದ ಕೆಳಗೆ ಹೋದಳು ಎಂದರೆ ನನಗೆ ಗೊತ್ತಿಲ್ಲ. ಆಗ ಪ್ರಭಾವತಿ ಇವಳು ತನ್ನ ಗಂಡನಿಗೆ ನನ್ನನ್ನು ಬದುಕಿಸು ಎಂದು ಕೇಳಿಕೊಂಡಳು ಎಂದರೆ ಸರಿ.

7. ಆಗ 1 ನೇ ಆರೋಪಿ ಪ್ರಭಾವತಿ ಇವಳ ಮೇಲೆ ನೀರನ್ನು ಹಾಕಿದಾ ಎಂದರೆ ಸಾಕ್ಷಿ ಸಂಬಂಧಿಕರು ಹಾಕಿದರು ಎಂದು ಉತ್ತರಿಸುತ್ತಾರೆ. ಆಗ 1 ನೇ ಆರೋಪಿ ಇನ್ನೊಮ್ಮೆ ನನ್ನ ತಂಟೆಗೆ ಬಂದರೆ ನಿನ್ನನ್ನು ಜೀವಸಹಿತ ಸುಟ್ಟು ಬಿಡುತ್ತೇನೆ ಎಂದು ಬೆದರಿಕೆ ಹಾಕಿದ ಎಂದರೆ ಸರಿಯಲ್ಲ. ಆಗ 1 ನೇ ಆರೋಪಿ ಹಾಗೇ ಹೋಗುತ್ತಿದ್ದ, ನಾನು ಮತ್ತು ಚಾಸಾ8 ಇಬ್ಬರು 1 ನೇ ಆರೋಪಿಗೆ ನಿನ್ನ ಹೆಂಡತಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗು ಎಂದು ಹೇಳಿದ್ದೆವು ಎಂದರೆ ಸರಿ.

8. ನಾನು ಮತ್ತು ಚಾಸಾ.8 , 1 ನೇ ಆರೋಪಿಯನ್ನು ನಿನ್ನ ಹೆಂಡತಿಯ ಮುಖಕ್ಕೆ ಏನನ್ನು ಉಗ್ಗಿ ಬೆಂಕಿ ಹಚ್ಚಿದೆ ಎಂದು ಕೇಳಿದಾಗ 1 ನೇ ಆರೋಪಿ ಮನೆಯಲಿದ್ದ ಬಣ್ಣಕ್ಕೆ ಸೇರಿಸುವ ಟರ್ಪೆಂಟೈಲ್ ಆಯಿಲ್ ಉಗ್ಗಿ ಬೆಂಕಿ ಹಚ್ಚಿರುತ್ತಾನೆ ಎಂದು ನಮಗೆ ತಿಳಿಸಿದ ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯಗಳನ್ನು ಪೋಲೀಸರಿಗೆ ಈಗ ಓದಿ ಹೇಳಲಾದ ನಿಪಿ.15 ರಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು 1 ನೇ ಆರೋಪಿ ಒಂದೇ ಓಣಿಯಲ್ಲಿ ಇರುವುದರಿಂದ 1 ನೇ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀಸವಾಲು 1 ರಿಂದ 3, 6 ಹಾಗೂ 7 ನೇ ಆರೋಪಿತರ ಪರವಾಗಿ ಶ್ರೀ ಬಿ.ವಿ.ಬಿ ವಕೀಲರಿಂದಃ</u>

9. ನಾನು ಮತ್ತು ಚಾಸಾ.8 1 ನೇ ಆರೋಪಿಯ ಮನೆಯ ಹತ್ತಿರ ಹೋದಾಗ ಚಾಸಾ.1 ಇವಳಿಗೆ ಸುಟ್ಟ ಗಾಯಗಳು ಆಗಲೇ ಆಗಿದ್ದವು. ನಾನು ಆ ಗಾಯಗಳು ಹೇಗೆ ಆಯಿತು ಎಂದು ಕಣ್ಣಾರೇ ನೋಡಿಲ್ಲ.

**10.** ನಾನು ಮತ್ತು ಚಾಸಾ.8 ಬೇರೆ ಪ್ರಕರಣಕ್ಕಾಗಿ ಪೋಲೀಸ್ ಠಾಣೆಗೆ ಹೋಗುತ್ತಿರುತ್ತೇವೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದಲ್ಲಿ ಏನೂ ಗೊತ್ತಿಲ್ಲದಿದ್ದರೂ ಕೂಡ ಪೋಲೀಸರ ಜೊತೆ ಒಡನಾಟ ಇದ್ದುದರಿಂದ ಈ ಪ್ರಕರಣದಲ್ಲಿ ಸಾಕ್ಷಿ ಎಂದು ಸೇರಿಕೊಂಡಿದ್ದಾರೆ ಮತ್ತು ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**11.** ದಿಃ**07.08.2023** ರಂದು ನಾನು ಮತ್ತು ಚಾಸಾ.8 ಇವರು **1** ನೇ ಆರೋಪಿಯ ಮನೆಯ ಹತ್ತಿರ ಹೋಗಿಲ್ಲ ಮತ್ತು ಈ ಘಟನೆಯ ಬಗ್ಗೆ ಏನೂ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ.8 ಇವರು **1** ನೇ ಆರೋಪಿಗೆ ನಿನ್ನ ಹೆಂಡತಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗು ಎಂದು ಹೇಳಿದ್ದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. **1** ನೇ ಆರೋಪಿ ಟರ್ಪೆಂಟೈಲ್ ದಿಂದ ತನ್ನ ಹೆಂಡತಿಗೆ ಬೆಂಕಿ ಹಚ್ಚಿದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಶ್ರೀ ಬಿ.ಟಿ.ಪಿ ವಕೀಲರಿಂದ **4** ಮತ್ತು **5** ನೇ ಆರೋಪಿತರ ಪರವಾಗಿ</u>

ಶ್ರೀ ಬಿ.ಟಿ.ಪಿ ವಕೀಲರು ಶ್ರೀ ಬಿ.ವಿ.ಬಿ ವಕೀಲರು ಮಾಡಿದ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

**C/c, 2** ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.